

بسم اللهِ الرّحمٰن الرّحيم

# ಅಲ್ಲಾಹನಿಂದ ನಿಯೋಜಿಸಲ್ಪಟ್ಟವರ ಉಪದೇಶಗಳ ಪ್ರಕಾರ ವರ್ತಿಸುವುದು ಸತ್ಯವಿಶ್ವಾಸಿಗಳ ಕಡ್ಡಾಯ ಕರ್ತವ್ಯವಾಗಿದೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ**24-07-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅವರ ಸಹಾಬ (ಶಿಷ್ಯರಿಗೆ) ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಪ್ರಸ್ತಾಪಿಸಿದ ಕೆಲವು ಘಟನೆಗಳನ್ನು ವಿವರಿಸುವೆನು.

ತಝ್ಕಿರ ಎಂಬ ಗ್ರಂಥದಲ್ಲಿ 1908 ಫೆಬ್ರವರಿ 9ರ ದಿನಾಂಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಲಭಿಸಿದ ಒಂದು ಇಲ್‌ಹಾಮ್ ಹೀಗೆ ಉಲ್ಲೇಖಿತವಾಗಿದೆ.

**ಲಾ ತಖ್‌ತುಲೂ ಝೈನಬ.** 'ಝೈನಬಳನ್ನು ಕೊಲ್ಲಬೇಡಿರಿ.' ಇದಕ್ಕೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಬರೆದಿದ್ದಾರೆ: "1908ರ ಆರಂಭ ಕಾಲದಲ್ಲಿ ಹಾಫಿಝ್ ಅಹ್ಮದುಲ್ಲಾ ಖಾನ್ ಸಾಹೇಬರ ಇಬ್ಬರು ಪುತ್ರಿಯರನ್ನು ವಿವಾಹ ಮಾಡಿಕೊಡುವ ಬಗ್ಗೆ ಪ್ರಸ್ತಾಪ ಉಂಟಾಯಿತು. ಅವರ ಹಿರಿಯ ಪುತ್ರಿ ಝೈನಬ್ ಮತ್ತು ಕಿರಿಯ ಪುತ್ರಿ ಕುಲ್‌ಸೂಮ್ ಆಗಿದ್ದರು. ಝೈನಬಳಿಗೆ ಕೆಲವಾರು ಪ್ರಸ್ತಾಪಗಳು ಬಂದಿದ್ದುವು. ಆ ಪೈಕಿ ಶೇಖ್ ಅಬ್ದುರ್ರಹ್ಮಾನ್ ಮಿಸ್ರಿ ಸಾಹಿಬ್ ಸಹ ಇದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮಿಸ್ರಿಗೆ ಹೆಣ್ಣು ಕೊಡುವ ಬಗ್ಗೆ ಅತೃಪ್ತಿ ಸೂಚಿಸಿದರು. ಆದರೆ ಅದರ ಬಗ್ಗೆ ಒತ್ತಾಯಿಸಿ ಹೇಳಲಿಲ್ಲ. ಝೈನಬಳ ವಿವಾಹ ಮಿಸ್ರಿ ಸಾಹೆಬರ ಜೊತೆ ನಡೆಯಿತು. ಈ ವಿವಾಹ ನಡೆದ ದಿನಾಂಕ ನನಗೆ ನೆನಪಿದೆ. ಏಕೆಂದರೆ ಆ ದಿನ ನನ್ನ ಸಹೋದರಿ ಮುಬಾರಕ ಬೇಗಮ್ ಸಹ ವಿವಾಹಿತೆಯಾದಳು. ಆ ದಿನಾಂಕ ಫೆಬ್ರವರಿ 17 ಆಗಿದೆ.

ಅಲ್ಲಾಹನ ಸಂದೇಶವಾಣಿಯಲ್ಲಿ ಹೀಗೆ ಸೂಚಿಸಲಾಗಿತ್ತು. ಆ ವ್ಯಕ್ತಿಯ ಮೂಲಕ ಬಹಳ ದೊಡ್ಡ ಪಿತೂರಿ ನಡೆಯಲಿದೆ. ಅದೇ ಪ್ರಕಾರ ಮಿಸ್ರಿಯಿಂದ ಬಹಳ ದೊಡ್ಡ ಪಿತೂರಿ ಜಮಾಅತಿನ ವಿರುದ್ಧ ಅನಂತರ ಸಂಭವಿಸಿತು. ಮಿಸ್ರಿ ಜಮಾಅತಿನಿಂದ ಬೇರೆಯಾದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಆ ವಿವಾಹದ ವಿರುದ್ಧ ಸಲಹೆ ನೀಡಿದ್ದರೆಂಬುದಕ್ಕೆ ಸಾಕ್ಷ್ಯವಿದೆ. ಮಿಸ್ರಿ ಸಾಹೇಬರು ಜಮಾಅತಿನಿಂದ ಬೇರೆಯಾಗಿ ಹೋದಾಗ ಪೀರ್ ಮನ್‌ಝೂರ್ ಮುಹಮ್ಮದ್ ಸಾಹೇಬರು ನನ್ನೊಂದಿಗೆ ಹೇಳಿದರು: ಮಿಸ್ರಿಯೊಂದಿಗೆ ವಿವಾಹ ನಡೆಸಬಾರದೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನನ್ನ ಮುಂದೆ ಹಾಫಿಝ್ ಅಹ್ಮದುಲ್ಲಾ ಸಾಹೇಬರಿಗೆ ಸಲಹೆ ನೀಡಿದ್ದರು. ಆದರೆ ಹಾಫಿಝ್ ಸಾಹೇಬರು ಆ ಮಾತಿಗೆ ಒಪ್ಪದೆ ಮಿಸ್ರಿಗೆ ಮಗಳನ್ನು ಮದುವೆ ಮಾಡಿ ಕೊಟ್ಟಾಗ ನನಗೆ ಬಹಳ ಕೋಪ ಉಂಟಾಯಿತು. ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಳಿಗೆ ಹೋಗಿ ಹೇಳಿದೆ: ತಾವು ಅಲ್ಲಾಹನಿಂದ ನಿಯೋಜಿಸಲ್ಪಟ್ಟವರಾಗಿರುವಿರಿ. ತನ್ನಿಂದ ನಿಯೋಜಿಸಲ್ಪಟ್ಟವನು ಒಂದು ಮಾತು ಹೇಳಿದರೆ ಅದನ್ನು ಒಪ್ಪಿಕೊಂಡು ಸತ್ಯವಿಶ್ವಾಸಿಗಳು ವರ್ತಿಸಬೇಕೆಂದು ಅಲ್ಲಾಹನ ಆಜ್ಞೆ ಇದೆ. ಆದರೆ ಹಾಫಿಝ್ ಅಹ್ಮದುಲ್ಲಾ ಸಾಹೇಬ್ ನಿಮ್ಮ ಮಾತನ್ನು ನಿರಾಕರಿಸಿದ್ದಾರೆ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: 'ನೀವು ಹೇಳುವುದು ಸರಿಯೆ. ಆದರೆ ಇಂತಹ ವಿಷಯಗಳಲ್ಲಿ ನಾನು ಹಸ್ತಕ್ಷೇಪ ಮಾಡುವುದಿಲ್ಲ' ಎಂದು ಹೇಳಿದರು."

ಒಮ್ಮೆ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಕಾಲದಲ್ಲಿ ಮಿಸ್ರಿ ಸಾಹೇಬ್ ಪೇಟೆಯಲ್ಲಿ ತನ್ನ ಪತ್ನಿಯ ಪಿತರಿಗೆ ಹೊಡೆದಿದ್ದರು. ಆಗ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಮಿಸ್ರಿಯ ವಿರುದ್ಧ ಬಹಳ ಕೋಪಗೊಂಡಿದ್ದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಅನೇಕ ದಿನಗಳ ಕಾಲ ವಿನೀತರಾಗಿ ಅಪೇಕ್ಷಿಸಿ ಮಿಸ್ರಿಗೆ ಕ್ಷಮೆ ದೊರಕುವಂತೆ ಮಾಡಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಉಂಟಾದ ಇಲ್‌ಹಾಮಿನ ಅರ್ಥ, ಝೈನಬಳನ್ನು ಮಿಸ್ರಿಗೆ ವಿವಾಹ ಮಾಡಿಕೊಡಬಾರದು ಎಂದಾಗಿತ್ತು. ಹಾಗೆ ಮಾಡಿದರೆ ಆಕೆಯ ವಿಶ್ವಾಸ ಸಹ ನಾಶವಾಗುವುದು ಎಂದು ಆ ಇಲ್‌ಹಾಮ್ ಸೂಚಿಸುತ್ತಿತ್ತು. ಅನಂತರ ಸಂಭವಿಸಿದ ಘಟನೆಗಳಿಂದ ಸಾಬೀತಾದುದೇನೆಂದರೆ ಆಕೆಯ ವಿಶ್ವಾಸ ಸಹ ನಾಶವಾಯಿತು ಎಂದು.

ಮಿಸ್ರಿ ಸಾಹೇಬರಿಗೆ ಜಮಾಅತಿನಲ್ಲಿ ಉನ್ನತ ಸ್ಥಾನವಿತ್ತು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: "ಒಬ್ಬ ವ್ಯಕ್ತಿ ಆಫ್ರಿಕದಿಂದ ನನಗೆ ಬರೆದರು– ಮಿಸ್ರಿ ಸಾಹೇಬರು ಜಮಾಅತನ್ನು ಬಿಟ್ಟು ಹೋದ ಕಾರಣ ನನಗೆ ಬಹಳ ಗಾಬರಿಯಾಗಿದೆ. ಇಷ್ಟು ದೊಡ್ಡ ಮನುಷ್ಯನ ವಿಶ್ವಾಸ ನಾಶವಾಗುವುದಾದರೆ ನಮ್ಮ ವಿಶ್ವಾಸದ ಸ್ಥಿತಿ ಏನಾಗುವುದು? ಎಂದು. ಆಗ ನಾನು ಅವರಿಗೆ ಹೀಗೆ ಉತ್ತರ ಬರೆದೆ. 'ಯಾರು ದೊಡ್ಡವರು ಎಂಬ ತೀರ್ಮಾನ ಮಾಡುವ ಕೆಲಸ ಅಲ್ಲಾಹನದಾಗಿದೆ. ಅದು ನಿಮ್ಮ ಕೆಲಸವಲ್ಲ. ಅಲ್ಲಾಹನು ಅವರನ್ನು ಜಮಾಅತಿನಿಂದ ಬೇರ್ಪಡಿಸಿದನು. ಆದರೆ ನಿಮ್ಮನ್ನು ಜಮಾಅತಿನಲ್ಲಿ ಇರಿಸಿದ್ದಾನೆ. ಇದರಿಂದ ಸಾಬೀತಾಗುವುದೇನೆಂದರೆ ದೊಡ್ಡ ಮನುಷ್ಯರು ನೀವಾಗಿರುವಿರಿ. ಅವರಲ್ಲ.' ಮಿಸ್ರಿ ಜಮಾಅತಿನಲ್ಲಿ ಇರುವಾಗ ಬಹಳ ಗೌರವಾರ್ಹರೆಂದು ಗಣಿಸಲ್ಪಡುತ್ತಿದ್ದರು. ಆದರೆ ಜಮಾಅತನ್ನು ಬಿಟ್ಟುಹೋದ ನಂತರ ಅವರು ನಗಣ್ಯರಾದರು. ಅಲ್ಲಾಹನಿಂದ ನಿಯೋಜಿಸಲ್ಪಟ್ಟವರ ಉಪದೇಶ ಪ್ರಕಾರ ವರ್ತಿಸುವುದು ಸತ್ಯವಿಶ್ವಾಸಿಗಳ ಕಡ್ಡಾಯ ಕರ್ತವ್ಯವಾಗಿದೆ. ಅವರ ಉಪದೇಶಗಳನ್ನು ಚೆನ್ನಾಗಿ ಮನವರಿಕೆ ಮಾಡಬೇಕು. ಸ್ವಂತ ವ್ಯಾಖ್ಯಾನಗಳನ್ನು ನೀಡದೆ ಅಕ್ಷರಶಃ ಆ ಉಪದೇಶಗಳನ್ನು

ಪಾಲಿಸಿದರೆ ಸತ್ಯವಿಶ್ವಾಸ ಹಾನಿಗೊಳಗಾಗದೆ ರಕ್ಷಿಸಲ್ಪಡುವುದು.''

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇನ್ನೊಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ: ''ಮೌಲವಿ ಮುಹಮ್ಮದ್ ಅಹ್‌ಸನ್ ಸಾಹೇಬ್ ಬಹಳ ಆತುರಪಡುವ ವ್ಯಕ್ತಿಯಾಗಿದ್ದರು. ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಾಯು ವಿಹಾರಕ್ಕೆ ಹೊರಟಾಗ ದಾರಿಯಲ್ಲಿ ಹೀಗೆ ಹೇಳಿದರು: 'ಅಲ್ಲಾಹನ ವಚನ ಮತ್ತು ಮನುಷ್ಯರ ಮಾತಿನ ಮಧ್ಯೆ ಬಹಳ ವ್ಯತ್ಯಾಸವಿರುತ್ತದೆ. ನೋಡಿರಿ ಇದು ನನಗೆ ಲಭಿಸಿದ ಇಲ್‌ಹಾಮ್ ಆಗಿದೆ. ಇದರೆದುರಿಗೆ ಅರಬಿ ಕವಿ ಹರೀರಿ ಬರೆದ ವಾಕ್ಯ ಸಹ ಇದೆ.' ಮೌಲವಿ ಮುಹಮ್ಮದ್ ಅಹ್‌ಸನ್ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕೊನೆಗೆ ಹೇಳಿದ ಮಾತನ್ನು ಶ್ರದ್ಧೆಯಿಂದ ಆಲಿಸದೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಲ್‌ಹಾಮ್ ಕವಿ ಹರೀರಿ ಹೇಳಿದ ಮಾತೆಂದು ತಪ್ಪಾಗಿ ಯೋಚಿಸಿ, 'ಈ ಮಾತು ಬಹಳ ಸಾಮಾನ್ಯವಾದುದು' ಎಂದು ಹೇಳಿದರು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಾನು ಉಚ್ಚರಿಸಿದುದು ಅಲ್ಲಾಹನ ಇಲ್‌ಹಾಮ್ ಆಗಿದೆ. ಆಗ ಕೂಡಲೇ ಮೌಲವಿ ಸಾಹೇಬರು 'ಸುಬ್‌ಹಾನಲ್ಲಾಹ್, ಎಷ್ಟು ಶ್ರೇಷ್ಠವಾದ ವಚನ' ಎಂದು ಹೇಳಿದರು.'' ಆದುದರಿಂದ ಯಾವುದಾದರೂ ವಿಷಯದ ಬಗ್ಗೆ ಅಭಿಪ್ರಾಯ ಹೇಳುವಾಗ ಆತುರಪಟ್ಟು ಹೇಳಬಾರದು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ''ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸ್ನೇಹಿತರಾಗಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಾನು ಮಹ್‌ದೀ ಮಸೀಹ್ ಎಂದು ವಾದಿಸಿದಾಗ ಮೌಲವಿ ಹೇಳಿದರು: ಈ ವ್ಯಕ್ತಿಯನ್ನು ನಾನೇ ಮೇಲಕ್ಕೇರಿಸಿರುವುದು. ನಾನೇ ಆತನನ್ನು ಕೆಳಗೆ ತಳ್ಳುವೆನು ಎಂದು. ಆದರೆ ಈ ಮೌಲವಿಯ ಹೆಸರನ್ನು ಅಲ್ಲಾಹನು ಅಳಿಸಿ ಬಿಟ್ಟನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೆಸರನ್ನು ಲೋಕದಲ್ಲೆಲ್ಲಾ ಹರಡಿದನು. ಮೌಲವಿ ಮುಹಮ್ಮದ್ ಹುಸೈನರ ಒಬ್ಬ ಪುತ್ರ ಆರ್ಯಾ ಸಮಾಜಕ್ಕೆ ಸೇರಿದನು. ನಾನು ಅವನನ್ನು ಖಾದಿಯಾನಿಗೆ ಕರೆಯಿಸಿ ಅವನನ್ನು ಪುನಃ ಮುಸ್ಲಿಮನನ್ನಾಗಿ ಮಾಡಿದೆ. ಅದರ ಬಗ್ಗೆ ಕೃತಜ್ಞತೆ ಸೂಚಿಸುವ ಪತ್ರ ನನಗೆ ಮೌಲವಿ ಮುಹಮ್ಮದ್ ಹುಸೈನ್ ಬರೆದಿದ್ದರು.''

ಆಂತರಿಕ ಮತ್ತು ಬಾಹ್ಯ ವಿರೋಧಗಳ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದ್ದರು– ''ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಿಂದಲೇ ವಿವಿಧ ರೀತಿಯ ವಿರೋಧಗಳ ಮತ್ತು ಕಾರಸ್ಥಾನಗಳ ಶೃಂಖಲೆ ಜಾರಿಯಲ್ಲಿದೆ. ಆದರೆ ಅಲ್ಲಾಹನ ಅನುಗ್ರಹದಿಂದ ಜಮಾಅತ್ ಅಭಿವೃದ್ಧಿಗೊಳ್ಳುತ್ತಾ ಇದೆ. ಅಹ್ಮದಿಯಾ ಜಮಾಅತ್ ಮುಳ್ಳಿನ ದಾರಿಯಲ್ಲಿ ಸಾಗುತ್ತಾ ಈಗಿನ ಸ್ಥಿತಿಗೆ ತಲುಪಿದೆ. ಅಲ್ಲಾಹನ ಅನುಗ್ರಹ ಜಮಾಅತಿನೊಂದಿಗೆ ಯಾವಾಗಲೂ ಇದೆ ಎಂದು ಇದು ಸಾಬೀತುಗೊಳಿಸುತ್ತದೆ. ಆದರೆ ಈ ಅನುಗ್ರಹವನ್ನು ಶಾಶ್ವತವಾಗಿ ನೆಲೆನಿಲ್ಲಿಸಲು ಜಮಾಅತ್ ಯಾವಾಗಲೂ ಪ್ರಾರ್ಥಿಸುತ್ತಾ ಇರಬೇಕು. ನಾವು ಪ್ರಾರ್ಥನೆಗಳನ್ನು ಅರ್ಹವಾದ ರೀತಿಯಲ್ಲಿ ಮಾಡುವುದಾದರೆ ಇನ್‌ಶಾಅಲ್ಲಾಹ್, ಇಂದಿನ ಕಾಲದ ವಿರೋಧಗಳೂ ಮುಂದಿನ ಕಾಲದಲ್ಲಿ ಸಂಭವಿಸಲಿರುವ ವಿರೋಧಗಳೂ ಎಲ್ಲವೂ ತಾನಾಗಿಯೇ ಸತ್ತು ಹೋಗುವುವು.''

ಒಂದು ಸಂದರ್ಭದಲ್ಲಿ ಹಝ್ರತ್ ಮೌಲವಿ ಅಬ್ದುಲ್ ಕರೀಮ್ ರಝಿಯಲ್ಲಾಹು ಅನ್‌ಹುರವರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದರು:

''ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರಿಗೆ ಅಲ್ಲಾಹನು ಉನ್ನತ ಮಟ್ಟದ ಉದ್ಯೋಗವನ್ನು ದಯಪಾಲಿಸಿದ್ದನು. ಅವರ ಆ ಉದ್ಯೋಗ ಕೊನೆಗೊಂಡಾಗ ಅವರು ತಮ್ಮ ಊರಿನಲ್ಲಿ ವೈದ್ಯಕೀಯ ಸೇವೆ ನಡೆಸಲು ಪ್ರಾರಂಭಿಸಿದರು. ಅವರು ಬಹಳ ಪ್ರಸಿದ್ಧ ಹಕೀಮರಾಗಿದ್ದರು. ಅವರ ಊರು ಸರಗೋಧಾ ಜಿಲ್ಲೆಯ ಭೇರ ಆಗಿತ್ತು. ಅಲ್ಲಿ ಬಹಳ ಶ್ರೀಮಂತ ಜಮೀನ್‌ದಾರರು ವಾಸಿಸುತ್ತಿದ್ದರು. ಅವರ ಪೈಕಿ ಬಹುತೇಕ ಜನರು ಅವರ ಬಳಿ ಚಿಕಿತ್ಸೆಗೆ ಬರುತ್ತಿದ್ದರು. ಅವರ ಮೇಲೆ ಬಹಳ ವಿಶ್ವಾಸ ಹೊಂದಿದ್ದರು. ಅಲ್ಲಿ ಅವರ ಕೆಲಸ ಯಶಸ್ವಿಯಾಗಿ ಮುಂದುವರಿಯುವ ಸಾಧ್ಯತೆಗಳಿದ್ದುವು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಭೇಟಿಯಾಗಲು ಖಾದಿಯಾನಿಗೆ ಹೋದರು. ಕೆಲವು ದಿನಗಳ ನಂತರ ಊರಿಗೆ ಮರಳಿ ಹೋಗಲು ನಿರ್ಧರಿಸಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: 'ನೀವು ಲೋಕವನ್ನು ಬಹಳ ನೋಡಿದ್ದೀರಿ. ಈಗ ಇಲ್ಲಿಯೇ ಉಳಿದುಕೊಳ್ಳಿರಿ.' ಎಂದು. ಈ ಆದೇಶವನ್ನು ಅವರು ಪಾಲಿಸಿದರು. ಅವರು ತಮ್ಮ ಸಾಮಗ್ರಿಗಳನ್ನು ತರಲು ಸಹ ಊರಿಗೆ ಹೋಗಲಿಲ್ಲ. ಅವರು ಬೇರೆ ಜನರನ್ನು ಕಳುಹಿಸಿ ತಮ್ಮ ಸಾಮಗ್ರಿಗಳನ್ನು ತರಿಸಿದರು. ಆ ಕಾಲದಲ್ಲಿ ಖಾದಿಯಾನಿನಲ್ಲಿ ಅವರ ಚಿಕಿತ್ಸಾಲಯ ಜಯಗಳಿಸುವ ಪ್ರತೀಕ್ಷೆ ಇರಲಿಲ್ಲ. ಇಲ್ಲಿ ಚಿಕಿತ್ಸೆಗಾಗಿ ಒಂದು ಪೈಸೆ ಖರ್ಚು ಮಾಡಲು ಶಕ್ತರಾದವರೂ ಇರಲಿಲ್ಲ. ಆದರೆ, ಅವರು ಈ ವಿಷಯಗಳನ್ನು ಲಕ್ಷಿಸಲಿಲ್ಲ. ಅವರು ಪ್ರಸಿದ್ಧ ಹಕೀಮರಾಗಿದ್ದ ಕಾರಣ ಹೊರಗಿನಿಂದ ರೋಗಿಗಳು ಅವರ ಬಳಿಗೆ ಬರತೊಡಗಿದರು. ಈ ರೀತಿ ಅವರಿಗೆ ಸಂಪಾದನೆಯ ಯಾವುದಾದರೊಂದು ಮಾರ್ಗ ತೆರೆಯಲ್ಪಡುತ್ತಿತ್ತು.

ಆದರೆ ಹಝ್ರತ್ ಮೌಲವಿ ಅಬ್ದುಲ್ ಕರೀಮ್ ಸಾಹೇಬರಿಗೆ ಸಂಪಾದನೆಯ ಯಾವ ಮಾರ್ಗವೂ ಇರಲಿಲ್ಲ. ಅವರಿಗೆ ಸಂಬಳವಾಗಲಿ ಸಹಾಯಧನವಾಗಲಿ ಏನೂ ದೊರಕುತ್ತಿರಲಿಲ್ಲ. ಆದರೂ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾರ್ಯದರ್ಶಿಯ ರೂಪದಲ್ಲಿ ಕೆಲಸ ಮಾಡುತ್ತಿದ್ದರು. ಈಗ ಎಲ್ಲ ವಿಭಾಗಗಳು ಮಾಡುತ್ತಾ ಇರುವ ಕೆಲಸಗಳನ್ನು ಆ ಕಾಲದಲ್ಲಿ ಅವರು ಒಬ್ಬರೇ ಮಾಡುತ್ತಿದ್ದರು. ಅವರಿಗೆ ಜೀವನಾಧಾರ ಏನೂ ಇರಲಿಲ್ಲ. ಮರುಭೂಮಿಯಲ್ಲಿ ಜೀವಾರ್ಪಣೆ ಮಾಡಿದ ಸ್ಥಿತಿ ಅವರದಾಗಿತ್ತು.'' ಇವು ನಮ್ಮ ಹಿರಿಯರ ಮಾದರಿಗಳು. ಈ

ಮಾದರಿಯನ್ನು ನಮ್ಮ ಜಮಾಅತಿಗೆ ಸೇವೆ ಸಲ್ಲಿಸಲು ಜೀವಾರ್ಪಣೆ ಮಾಡಿದವರು ಪದೇ ಪದೇ ತಮ್ಮ ಮುಂದೆ ತಂದು ಚಿಂತಿಸಬೇಕಾಗಿದೆ.

ಹಝ್ರತ್ ಮೌಲವಿ ಅಬ್ದುಲ್ ಕರೀಮ್ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಹೊಂದಿದ್ದ ವಿಶಿಷ್ಟ ಪ್ರೇಮದ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಹಝ್ರತ್ ಮೌಲವಿ ಅಬ್ದುಲ್ ಕರೀಮ್ ಸಾಹೇಬರಿಗೆ ಎಂತಹ ವಿಶಿಷ್ಟ ಪ್ರೇಮ ಭಾವನೆ ಇತ್ತೆಂದರೆ ಅದನ್ನು ಆ ಕಾಲಘಟ್ಟವನ್ನು ಕಂಡವರೇ ಅರ್ಥ ಮಾಡಿಕೊಳ್ಳಬಲ್ಲರು. ಇತರರಿಗೆ ಅದನ್ನು ಊಹಿಸಲು ಸಾಧ್ಯವಿಲ್ಲ. ಅವರು ಮೃತರಾಗುವಾಗ ನನ್ನ ಪ್ರಾಯ ಹದಿನಾರು ಹದಿನೇಳು ವರ್ಷವಾಗಿರಬಹುದು. ಆದರೆ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಹೊಂದಿದ ಪ್ರೇಮವನ್ನು ನಾನು ಗುರುತಿಸಿದಾಗ ನನ್ನ ಪ್ರಾಯ ಹನ್ನೆರಡು–ಹದಿಮೂರು ಆಗಿತ್ತು. ಆಗ ನಾನು ಬಾಲಕನಾಗಿದ್ದರೂ ನನ್ನ ಮೇಲೆ ಮೌಲವಿ ಸಾಹೇಬರ ಬಹಳ ಗಾಢವಾದ ಪ್ರಭಾವ ಉಂಟಾಗಿತ್ತು. ಅವರಿಗೆ ಸಂಬಂಧಿಸಿ ಎರಡು ವಿಷಯಗಳನ್ನು ನಾನು ಮರೆತು ಬಿಡಲಾರೆ. ಒಂದು ಅವರು ನೀರು ಕುಡಿಯುತ್ತಾ ಇದ್ದುದು. ಇನ್ನೊಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಗ್ಗೆ ಅವರು ಹೊಂದಿದ್ದ ಪ್ರೀತಿ. ಅವರು ತಣ್ಣೀರನ್ನು ಬಹಳ ಇಷ್ಟಪಡುತ್ತಿದ್ದರು. ಅದನ್ನು ಬಹಳ ಸಂತೋಷದಿಂದ ಕುಡಿಯುತ್ತಿದ್ದರು. ಆಗ ಅವರ ಬಾಯಿಯಿಂದ ಎಂತಹ ಶಬ್ದ ಹೊರಡುತ್ತಿತ್ತೆಂದರೆ, ಅಲ್ಲಾಹನು ಅವರಿಗೆ ಸ್ವರ್ಗದ ಅನುಗ್ರಹಗಳನ್ನು ಜಮಾಯಿಸಿ ಕಳುಹಿಸಿರುವನೋ ಎಂಬಂತೆ. ಕೆಲವು ಗುಟುಕು ನೀರು ಕುಡಿದ ಕೂಡಲೆ **ಅಲ್‌ಹಮ್ದುಲಿಲ್ಲಾಹ್, ಅಲ್‌ಹಮ್ದುಲಿಲ್ಲಾಹ್** ಎಂದು ಹೇಳುತ್ತಿದ್ದರು. ಆ ಕಾಲದಲ್ಲಿ ಮಸ್‌ಜಿದ್ ಅಕ್‌ಸಾದ ಭಾವಿಯ ನೀರು ಪ್ರಸಿದ್ಧವಾಗಿತ್ತು. (ಈಗ ಅದರ ಬಗ್ಗೆ ಜನರು ಏಕೆ ಪ್ರಸ್ತಾಪಿಸುವುದಿಲ್ಲ ಎಂದು ತಿಳಿಯದು.) ಅವರು ಹೇಳುತ್ತಿದ್ದರು: 'ನೋಡಿರಿ, ಯಾರಾದರೂ ನೀರು ತಂದುಕೊಟ್ಟು ಪುಣ್ಯ ಗಳಿಸಿರಿ' ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಭೆಯಲ್ಲಿ ಇರದಿದ್ದ ಸಮಯದಲ್ಲಿ ಅವರು ಮಸ್‌ಜಿದ್ ಮುಬಾರಕ್‌ನ ಮೆಟ್ಟಿಲುಗಳ ಮೇಲೆ ನಿಂತು ನೀರು ತರುವವರನ್ನು ನಿರೀಕ್ಷಿಸುತ್ತಿದ್ದರು. ಅವರು ನೀರು ತರುವವರಿಂದ ಲೋಟ ತೆಗೆದುಕೊಂಡು ನೀರು ಕುಡಿಯುತ್ತಿದ್ದರು.

ಮೌಲವಿ ಅಬ್ದುಲ್ ಕರೀಮ್ ಸಾಹೇಬರಿಗೆ ಸಂಬಂಧಿಸಿದ ಇನ್ನೊಂದು ವಿಷಯ, ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಹೊಂದಿದ ಪ್ರೀತಿಯಾಗಿದೆ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸನ್ನಿಧಿಯಲ್ಲಿ ಕುಳಿತಿರುವಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಎಷ್ಟು ಪ್ರೀತಿಯಿಂದ ನೋಡುತ್ತಿದ್ದರೆಂದರೆ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶರೀರದಿಂದ ಏನಾದರೂ ವಸ್ತು ತೆಗೆದು ತಿನ್ನುತ್ತಿರುವರೋ ಎಂಬಂತೆ. ಆಗ ಅವರ ಮುಖದಲ್ಲಿ ಸುಖಸಂತೋಷದ ಉದ್ಯಾನವೇ ರೂಪುಗೊಂಡಂತೆ ಕಾಣಿಸುತ್ತಿತ್ತು. ಅವರ ಮುಖದ ಕಣಕಣಗಳೂ ಸಂತೋಷದ ತೆರೆಗಳನ್ನು ಹಾಯಿಸುವಂತೆ ಕಾಣಿಸುತ್ತಿದ್ದುವು. ಅವರು ಮುಗುಳು ನಗುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತುಗಳನ್ನು ಆಲಿಸುತ್ತಿದ್ದರು. ಮತ್ತು ವಿವಿಧ ರೀತಿಗಳಲ್ಲಿ ಪ್ರಶಂಸಿಸುತ್ತಾ ಇದ್ದುದು ಕಾಣಲು ಅರ್ಹವಾದ ದೃಶ್ಯವಾಗಿತ್ತು. ಅವರ ಈ ಸ್ವಭಾವ ಗುಣದ ಸ್ವಲ್ಪ ಮಾತ್ರ ಅಂಶ ನಾನು ಕಂಡದ್ದು ಹಾಫಿಝ್ ರೋಶನ್ ಅಲಿಯವರಲ್ಲಾಗಿದೆ. ಒಟ್ಟಿನಲ್ಲಿ ಮೌಲವಿ ಅಬ್ದುಲ್ ಕರೀಮ್ ಸಾಹೇಬರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ವಿಶಿಷ್ಟವಾದ ಪ್ರೇಮವಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಹ ಮೌಲವಿ ಅಬ್ದುಲ್ ಕರೀಮ್‌ರೊಂದಿಗೆ ಹಾಗೆಯೇ ಪ್ರೇಮವಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಗ್‌ರಿಬ್ ನಮಾಝ್ ನಂತರ ಮಸ್‌ಜಿದ್‌ನಲ್ಲಿ ಕುಳಿತು ಮಾತನಾಡುವುದು ವಾಡಿಕೆಯಾಗಿತ್ತು. ಆದರೆ ಮೌಲವಿ ಸಾಹೇಬರು ಮೃತರಾದ ನಂತರ ಈ ಅಭ್ಯಾಸವನ್ನು ಮಸೀಹ್ ಮೌಊದ್ ಬಿಟ್ಟು ಬಿಟ್ಟರು. ಅದರ ಬಗ್ಗೆ ಒಬ್ಬರು ಕೇಳಿದಾಗ ಹೇಳಿದರು: ಮೌಲವಿ ಅಬ್ದುಲ್ ಕರೀಮ್ ಕುಳಿತ ಸ್ಥಳ ಬರಿದಾಗಿರುವುದನ್ನು ಕಾಣುವಾಗ ದುಃಖವಾಗುತ್ತದೆ ಎಂದು. ಈ ಪ್ರೀತಿ ಏಕಮುಖವಾಗಿರಲಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಹ ತನ್ನ ಶಿಷ್ಯರನ್ನು ಬಹಳ ಪ್ರೀತಿಸುತ್ತಿದ್ದರು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇನ್ನೊಬ್ಬ ಸಹಾಬಿ ಹಝ್ರತ್ ಮುನ್‌ಶೀ ಅರೋಡೆ ಖಾನ್ ಸಾಹೇಬರಿಗೆ ಇದ್ದ ಪ್ರೇಮದ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: "ಹಝ್ರತ್ ಅರೋಡೆ ಖಾನ್ ಸಾಹೇಬರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ವಿಶಿಷ್ಟ ಪ್ರೇಮವಿತ್ತು. ಅವರು ಕಪುರ್ತಲ ಎಂಬಲ್ಲಿ ವಾಸಿಸುತ್ತಿದ್ದರು. ಕಪುರ್ತಲದ ಜಮಾಅತಿನ ನಿಷ್ಠೆಯ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ಪ್ರಶಂಸಿಸುತ್ತಿದ್ದರು. ಆ ಜಮಾಅತಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬರೆದುಕೊಟ್ಟ ಒಂದು ಪತ್ರದಲ್ಲಿ ಹೀಗೆ ಬರೆದಿದ್ದಾರೆ: 'ಈ ಜಮಾಅತ್ ನನ್ನೊಂದಿಗೆ ಎಂತಹ ನಿಷ್ಠೆ ಪ್ರಕಟಿಸಿದೆ ಎಂದರೆ ಈ ಜಮಾಅತ್ ಸ್ವರ್ಗದಲ್ಲಿ ನನ್ನ ಜೊತೆ ಇರುವುದು' ಎಂದು.

ಅರೋಡೆ ಖಾನ್ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಕಪುರ್ತಲಕ್ಕೆ ಬರಲು ಪದೇ ಪದೇ ಅಪೇಕ್ಷಿಸುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಂದರ್ಭ ದೊರಕಿದಾಗ ಬರುವೆನೆಂದು ವಾಗ್ದಾನ ಮಾಡಿದ್ದರು. ಒಮ್ಮೆ ಕಪುರ್ತಲಕ್ಕೆ ಹೋಗುವ ಸಂದರ್ಭ ಲಭಿಸಿತು. ಆದರೆ ಕಪುರ್ತಲದ ಜಮಾಅತಿಗೆ ಆ ಬಗ್ಗೆ ತಿಳಿಸಲು ಸಮಯವಿರಲಿಲ್ಲ. ಆದುದರಿಂದ ಮುಂಚಿತವಾಗಿ ತಿಳಿಸದೆಯೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೊರಟರು. ಅವರು ಕಪುರ್ತಲದ ರೈಲ್ವೇ ಸ್ಟೇಷನ್‌ನಲ್ಲಿ ಇಳಿದಾಗ ಕಠಿಣ ಶತ್ರುವಾಗಿದ್ದ ಓರ್ವ ವ್ಯಕ್ತಿ ಅವರನ್ನು ಕಂಡನು. ಆದರೆ ಹಿರಿಯ ವ್ಯಕ್ತಿಗಳಿಗೆ ಒಂದು ಪ್ರತ್ಯೇಕ ಪ್ರಭಾವವಿರುತ್ತದೆ. ಮುನ್‌ಶೀ

ಅರೋಡೆ ಖಾನ್ ಸಾಹೇಬರು ಹೇಳುತ್ತಾರೆ– ನಾನು ಒಂದು ಅಂಗಡಿಯಲ್ಲಿ ಕುಳಿತಿದ್ದೆ. ಆ ವ್ಯಕ್ತಿ ಓಡುತ್ತಾ ಬಂದು ಹೇಳಿದ 'ನಿಮ್ಮ ಮಿರ್ಝಾ ಸಾಹೇಬರು ಆಗಮಿಸಿದ್ದಾರೆ' ಎಂದು. ನಾನು ಪಗಡಿ ಮತ್ತು ಪಾದರಕ್ಷೆ ಅಂಗಡಿಯಲ್ಲಿಯೇ ಬಿಟ್ಟು ವೇಗವಾಗಿ ರೈಲ್ವೇ ಸ್ಟೇಷನ್ ಕಡೆಗೆ ಓಡಿದೆ. ಸ್ವಲ್ಪ ದೂರ ಓಡಿದ ನಂತರ ನಿಂತು ಯೋಚಿಸಿದೆ– ಪ್ರಾಯಶಃ ನನಗೆ ಸಮಾಚಾರ ನೀಡಿದ ವ್ಯಕ್ತಿ ಸುಳ್ಳು ಹೇಳಿರಬಹುದು; ತಮಾಷೆಗಾಗಿ ಹೇಳಿರಬಹುದು ಎಂದು. ನಾನು ನಿಂತುಕೊಂಡು 'ನೀನು ಸುಳ್ಳು ಹೇಳುತ್ತಿರುವೆ' ಎಂದು ಹೇಳಲು ತೊಡಗಿದೆ. ಆದರೆ ಪುನಃ ಯೋಚಿಸಿದೆ. ಪ್ರಾಯಶಃ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಮಿಸಿರಲೂಬಹುದು ಎಂದು. ಅನಂತರ ಪುನಃ ಓಡಿದೆ. ಆಮೇಲೆ ಪುನಃ ನಿಂತು ಆ ಶತ್ರುವನ್ನು ನಿಂದಿಸಲು ತೊಡಗಿದೆ. ಆಗ ಆ ವ್ಯಕ್ತಿ ಹೇಳಿದನು– ನನ್ನನ್ನು ಟೀಕಿಸಬೇಡ. ನಾನು ಸಹ ನಿಮ್ಮ ಜೊತೆಗೆ ಬರುತ್ತೇನೆ ಹೋಗುವ ಎಂದು ಹೇಳಿದ. ನಾನು ಹೀಗೆ ಓಡುತ್ತಾ ನಿಲ್ಲುತ್ತಾ ಸಾಗುತ್ತಿದ್ದಾಗ ನನ್ನ ಕಣ್ಣ ಮುಂದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಂಡೆನು.'

ಇದು ಹುಚ್ಚು ಹಿಡಿಸುವಂತಹ ಪ್ರೇಮವಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದ ನಂತರ ಮುನ್‌ಶೀ ಅರೋಡೆ ಖಾನ್ ಸಾಹೇಬರು ಒಮ್ಮೆ ಖಾದಿಯಾನಿಗೆ ಬಂದರು. ಬಂದು ನನ್ನನ್ನು ಭೇಟಿಯಾಗಿ ನನ್ನ ಕೈಯಲ್ಲಿ ಎರಡು ಅಥವಾ ಮೂರು ಚಿನ್ನದ ನಾಣ್ಯಗಳನ್ನು ಕೊಟ್ಟು ಅಮ್ಮಾಜಾನ್‌ರಿಗೆ (ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪತ್ನಿಗೆ) ಕೊಡಲು ಹೇಳಿದರು. ಅನಂತರ ಅವರು ಗೋಳಿಡುತ್ತಾ ಅಳಲು ಪ್ರಾರಂಭಿಸಿದರು. ಅವರ ದೇಹ ನಡುಗುತ್ತಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನೆನಪಿಸಿ ಅವರು ಅಳುತ್ತಿದ್ದಾರೆಂದು ನನಗೆ ತಿಳಿದಿತ್ತು. ಅವರು ನಿರಂತರವಾಗಿ ಅಳುತ್ತಾ ಇರುವುದರಿಂದ ಬೇರೆ ಏನಾದರೂ ಕಾರಣ ಸಹ ಇರಬಹುದೆಂದು ನಾನು ಯೋಚಿಸಿದೆ. ಅವರು ಅಂದಾಜು ಅರ್ಧಗಂಟೆ ಕಾಲ ಅಳುತ್ತಾ ಇದ್ದರು. ನಾನು ಅವರೊಂದಿಗೆ ನಿಮಗೇನಾಗಿದೆ ಎಂದು ಕೇಳುತ್ತಾ ಇದ್ದೆ. ಅವರು ಉತ್ತರ ಹೇಳಲು ಪ್ರಯತ್ನಿಸಿದರಾದರೂ ದುಃಖ ಉಮ್ಮಳಿಸಿ ಅವರಿಗೆ ಏನೂ ಹೇಳಲು ಸಾಧ್ಯವಾಗುತ್ತಿರಲಿಲ್ಲ. ನಂತರ ಅವರು ಸ್ವಲ್ಪ ಸುಧಾರಿಸಿಕೊಂಡಾಗ ಹೀಗೆ ಹೇಳಿದರು: 'ನಾನು ಬೈಅತ್ ಮಾಡಿದ ಕಾಲದಲ್ಲಿ ನನ್ನ ಸಂಬಳ ತಿಂಗಳಿಗೆ ಏಳು ರೂಪಾಯಿ ಇತ್ತು. ನಾನು ಬಹಳ ಮಿತವ್ಯಯ ಮಾಡಿ ಸ್ವಲ್ಪ ಹಣ ಉಳಿಸಿ ಖಾದಿಯಾನಿಗೆ ಬಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಕೊಡಲು ಇಚ್ಛಿಸುತ್ತಿದ್ದೆ. ನಾನು ಖಾದಿಯಾನಿಗೆ ಬರುವಾಗ ಬಹಳ ದೂರ ನಡೆದುಕೊಂಡೇ ಬರುತ್ತಿದ್ದೆ. ಹಣ ಉಳಿತಾಯ ಮಾಡಲು ಪ್ರಯತ್ನಿಸುತ್ತಿದ್ದೆ. ಅನಂತರ ನನ್ನ ಸಂಬಳ ವರ್ಧಿಸಿತು. ಅದರೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಹಣ ಅರ್ಪಿಸುವ ಆಶೆಯೂ ವರ್ಧಿಸಿತು. ಕೊನೆಗೆ ನಾನು ಯೋಚಿಸಿದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಚಿನ್ನದ ನಾಣ್ಯಗಳನ್ನು ನೀಡಬೇಕೆಂದು. ಆದರೆ ಅದಕ್ಕೋಸ್ಕರ ಹಣ ಜಮಾಯಿಸುತ್ತಾ ಇರುವಾಗ ನನಗೆ ಯೋಚನೆ ಉಂಟಾಗುತ್ತಿತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಂಡು ಬಹಳ ಸಮಯವಾಗಿದೆ. ಅವರನ್ನು ಹೋಗಿ ಕಾಣಬೇಕು. ಈ ಕಾರಣದಿಂದ ಚಿನ್ನದ ನಾಣ್ಯ ಖರೀದಿಸಲು ಜಮಾಯಿಸಿದ ಹಣದಿಂದ ಚಿನ್ನ ಖರೀದಿಸಲು ಸಾಧ್ಯವಾಗುವ ಮೊದಲೇ ಖಾದಿಯಾನಿಗೆ ಬಂದು ನನ್ನ ಕೈಯಲ್ಲಿ ಇರುವುದನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಕೊಡುತ್ತಿದ್ದೆ. ಕೊನೆಗೆ ಈ ಮೂರು ನಾಣ್ಯಗಳನ್ನು ಖರೀದಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ನೀಡಲು ಬಯಸಿದಾಗ ಅವರು ನಿಧನ ಹೊಂದಿದ್ದಾರೆ.' ಮುನ್‌ಶೀ ಸಾಹೇಬರು ಮೂವತ್ತು ವರ್ಷಗಳ ಕಾಲ ಈ ಯೋಚನೆಯಲ್ಲಿಯೇ ಮುಳುಗಿದ್ದರು. ಅದಕ್ಕೋಸ್ಕರ ಪರಿಶ್ರಮ ಸಹ ಮಾಡಿದರು. ಆದರೆ ಚಿನ್ನದ ನಾಣ್ಯ ಅರ್ಪಿಸಲು ಅವರಿಗೆ ಸಾಧ್ಯವಾದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದರು." ಆ ಹಿರಿಯರ ನಿಷ್ಠೆ, ಪ್ರೇಮ ಮತ್ತು ತ್ಯಾಗ ಆ ರೀತಿಯಾಗಿತ್ತು.

{ಖುತ್‌ಬ ಜುಮುಅದ ಕೊನೆಗೆ ಹಝ್ರತ್ ಖಲೀಫತುಲ್ ಮಸೀಹ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಅವರು ಮೌಲವಿ ಮುಹಮ್ಮದ್ ಯೂಸುಫ್ ಸಾಹೇಬ್ ದರ್ವೇಶ್‌ರವರ ನಮಾಝ್ ಜನಾಝ ಗಾಯಿಬ್ ಅನುಷ್ಟಿಸುವ ಬಗ್ಗೆ ಪ್ರಕಟಿಸಿ ಅವರು ಜಮಾಅತಿಗೆ ಮಾಡಿದ ಸೇವೆಗಳ ಬಗ್ಗೆ ಪ್ರಸ್ತಾಪಿಸಿದರು.}

———————————————*****——————————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 24-07-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email*:** *khutuba.kannada@gmail.com*



**You can find all the Sermons archived at**: www.alislam.org/friday-sermon